**Anti Land-Grabbing Action Committee**

**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

Website : http://savekarnataka.in email: karnatakasave@gmail.com

12th June 2015

**Sub**: His Excellency the Governor of Karnataka is requested to intervene to uphold the dignity of the Lokayukta institution and to restore the faith among citizens.

Respected Your Excellency,

The recent revelation in the media about the extortion of crores of rupees in the names of senior police officers working in the Lokayukta institution itself is a very serious matter which has shaken the faith of the citizens. The extracts of the letter written by Smt Sonia Narang, IPS, Superintendent of Police, Bangalore urban Division , Karnataka Lokayukta to the Registrar , Lokayukta published in the media reveals the brazen manner in which bribes are demanded in the premises of the Lokayukta institution itself with an assurance to corrupt government officers that raids would not be conducted, B reports would be filed even in serious corruption cases, etc.,

The fact that there are corrupt officers in the Lokayukta institution also is known to everyone and is discussed in a hush-hush manner everywhere. Even the former Lokayukta Justice Sri Santosh N. Hegde has admitted in the media that there were corrupt officials in the Lokayukta institution even when he was the Lokayukta and that he had tried to address the issue to some extent. But what is most shocking in the revelation is the fact that the demand for bribe was made in the premises of the Lokayukta institution very close to the Lokayukta chamber. The specific details mentioned in the letter written by Smt Sonia Narang, IPS, speak volumes about the lack of vigilance in the Lokayukta institution itself.

The present case has assumed significance from the fact that it has taken place in the Central office of the Lokayukta institution and that it has been reported by a Police officer working in the Lokayukta institution itself and not from any outsiders. As Smt.Sonia Narang, IPS has rightly pointed out, the citizens look up to the Lokayukta institution with a lot of faith as it is the only institution which the people can approach for corruption complaints against government officials. As an Anti-Corruption institution, the least the people would expect is that the institution itself should be clean as it has the huge responsibility of cleansing all government offices.

Our Anti Land-Grabbing Action Committee has been demanding not only action against those involved in land grabbing but also against senior officers who failed to take action even when specific directions were given by the Hon'ble High Court. Our Committee along with many likeminded organisations held a protest rally on 2nd May 2015 , which made the Lokayukta to take suo-moto cognizance in respect of three serious cases of land-grabbing by powerful people in the government. Till today, we have not heard anything about the action taken by the Lokayukta on the complaints given by us.

It is unfortunate that periodically powerful corrupt people in the government make efforts to not only weaken the institution of the Lokayukta but also dilute the Lokayukta Act itself. Law abiding citizens expected the present Lokayukta also to oppose such moves as the previous Lokayukta used to do whenever the Lokayukta was side-lined ignoring the statutory provisions. Even in the present case, investigation should have been conducted with lightning speed in a transparent manner and action should have been initiated at the earliest as the very credibility of the Lokayukta institution is at stake. But the long silence on the part of the Lokayukta on a complaint given by a Police officer working in the Lokayukta institution itself is a matter of serious concern which calls for the immediate intervention of H.E the Governor. Being the Constitutional Head in the State, it is hightime for Your Excellency to intervene and to uphold the dignity and discipline of the institution of Lokayukta. Your Excellency is requested to ensure that the Lokayukta institution works above all suspicions as the people still believe that the Lokayukta institution is the last bastion to curb corruption.

**In the light of the above, we request H.E the Governor to initiate action in respect of the following:**

1. **To entrust the investigation of the specific case revealed by Smt. Sonia Narang, IPS, to an independent Special Investigation team (SIT) comprising of Members of impeccable integrity. The hearings should be conducted in public to ensure maximum transparency.**
2. **To safeguard and reveal all files pertaining to complaints given against senior officers and elected representatives which have been closed since 2013.**
3. **Thorough scrutiny of cases handled by officers who got posted to the Lokayukta institution without the prior consent of the Lokayukta.**

We sincerely hope that Your Excellency would take the above measures to uphold the dignity and sanctity of the Lokayukta institution and restore the faith of citizens.

Thanking you,

Yours Sincerely,

(A.T.Ramaswamy)

Convener, Anti Land-Grabbing Action Committee

His Excellency Sri. Vajubhai Rudabhai Vala
Governor of Karnataka,
Raj Bhavan ,Bangalore

**Copy to** :

1. The Hon'ble Chief Justice of Karnataka, High Court of Karnataka with a request to take suo-moto cognizance of this serious case and treat it as a PIL.
2. The Hon'ble Lokayukta, Karnataka Lokayukta, MS Building, Bangalore with a request to do the needful which must be done under such circumstances.
3. The Hon'ble Chief Minister, Government of Karnataka, Vidhana Soudha, Bangalore with a request to consider the above incident seriously and immediately recall all officers posted to the Lokayukta institution without taking prior consent of the Hon'ble Lokayukta .

**Anti Land-Grabbing Action Committee**

**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**

No. 759, 5th Main, 8th Cross, R.T.Nagar, II Block, Bangalore 560032 Ph: 094481 20305
Website : http://savekarnataka.in email: karnatakasave@gmail.com

---

**ಪತ್ರಿಕಾ ಪ್ರಕಟಣೆ** **13th June 2015**

ಇತ್ತೀಚೆಗೆ ಬಯಲಾಗಿರುವ ಒಂದಂಕಿ ಲಾಟರಿ ಹಗರಣದಲ್ಲಿ ರಾಜ್ಯದ ಭ್ರಷ್ಟ ಪೋಲೀಸ್ ಮಾಫಿಯಾದ ಕರಾಳ ಮುಖ ಬಹಿರಂಗವಾಗಿರುವುದು ಜನತೆಯನ್ನು ಬೆಚ್ಚಿ ಬೀಳಿಸಿ, ರಾಜ್ಯದ ಪೋಲೀಸ್ ವ್ಯವಸ್ಥೆಯ ಮೇಲೆ ನಂಬಿಕೆ ಕುಸಿಯುವಂತೆ ಮಾಡಿದೆ. ಇದರ ಬೆನ್ನಲ್ಲೇ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರವನ್ನು ನಿಗ್ರಹಿಸಬೇಕಾದ ಲೋಕಾಯುಕ್ತ ಸಂಸ್ಥೆಯಲ್ಲೇ ಭ್ರಷ್ಟಾಚಾರದ ಕರಿನೆರಳು ಕಾಣಿಸಿಕೊಂಡಿರುವುದು ಆತಂಕಕಾರಿ ಸಂಗತಿಯಾಗಿದೆ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಲೋಕಾಯುಕ್ತ ಸಂಸ್ಥೆಯ ಮುಖ್ಯ ಕಛೇರಿಯ ಒಳಾಂಗಣದಲ್ಲಿ, ಅದರಲ್ಲೂ ಮಾನ್ಯ ಲೋಕಾಯುಕ್ತರ ಕೊಠಡಿಯ ಪಕ್ಕದಲ್ಲಿಯೇ ಅದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಪೋಲೀಸ್ ಅಧಿಕಾರಿಗಳ ಹೆಸರುಗಳನ್ನು ದುರುಪಯೋಗಪಡಿಸಿಕೊಂಡು ನಿರ್ಭೀತಿಯಿಂದ ಲಂಚಕ್ಕೆ ಬೇಡಿಕೆ ಇಟ್ಟಿರುವುದು ಲೋಕಾಯುಕ್ತ ಸಂಸ್ಥೆಯ ಘನತೆಗೆ ಮತ್ತು ಗೌರವಕ್ಕೆ ದಕ್ಕೆ ತಂದಿದೆ.

ಲೋಕಾಯುಕ್ತ ಸಂಸ್ಥೆಯಲ್ಲೇ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಪೋಲೀಸ್ ಅಧಿಕಾರಿ ಶ್ರೀಮತಿ ಸೋನಿಯಾ ನಾರಂಗ್ , ಐಪಿಎಸ್, ರವರು ಇದರ ವಿರುದ್ಧ ದೂರು ನೀಡಿರುವುದು ಅತ್ಯಂತ ಗಂಭೀರ ವಿಷಯವಾಗಿದೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ನಮ್ಮ ಸಮಿತಿಯು ನೆನ್ನೆ , 12/06/2015 ರಂದು, ಗೌರವಾನ್ವಿತ ರಾಜ್ಯಪಾಲರಿಗೆ ಪತ್ರ ಬರೆದು ರಾಜ್ಯದಲ್ಲಿ ಸಾಂವಿಧಾನಿಕ ಮುಖ್ಯಸ್ಥರಾಗಿರುವ ಅವರು, ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ಲೋಕಾಯುಕ್ತ ಸಂಸ್ಥೆಯ ಘನತೆ ಮತ್ತು ಪಾವಿತ್ರ್ಯತೆ ಕಾಪಾಡಿಕೊಳ್ಳಲು ಬೇಕಾದ ಅಗತ್ಯ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ಕೋರಲಾಗಿದೆ.

ಪತ್ರದ ಕನ್ನಡ ಅನುವಾದ ಇಂತಿದೆ:

ಗೌರವಾನವಿತ ರಾಜ್ಯಪಾಲರೇ,

ಸ್ವತಃ ಲೋಕಾಯುಕ್ತ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹಿರಿಯ ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ದುರುಪಯೋಗ ಪಡಿಸಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ಬಹಿರಂಗವಾಗಿರುವುದು ಒಂದು ಅತ್ಯಂತ ಗಂಭೀರ ವಿಷಯವಾಗಿದ್ದು ನಾಗರಿಕರ ನಂಬಿಕೆಗೆ ದಕ್ಕೆ ಉಂಟಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲಿ, ಬೆಂಗಳೂರು ನಗರ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಸೋನಿಯಾ ನಾರಂಗ್ , ಐಪಿಎಸ್ ರವರು ಕರ್ನಾಟಕ ಲೋಕಾಯುಕ್ತ ರಿಜಿಸ್ಟ್ರಾರ್ ಗೆ ಬರೆದ ಪತ್ರದ ಸಾರಾಂಶವು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದು, ಸ್ವತಃ ಸಂಸ್ಥೆಯ ಆವರಣದಲ್ಲೇ ಭ್ರಷ್ಟ ಸರ್ಕಾರಿ ಅಧಿಕಾರಿಗಳಿಗೆ ರಕ್ಷಣೆಯ ಭರವಸೆ ನೀಡಿ , ಅವರ ಮೇಲೆ ದಾಳಿ ನಡೆಸದೇ ಇರಲು, ಅವರ ಪ್ರಕರಣಗಳಲ್ಲಿ 'ಬಿ' ವರದಿಗಳು ಸಲ್ಲಿಸಲು ಯಾವ ರೀತಿಯಲ್ಲಿ ಲಜ್ಜೆಗೆಟ್ಟು ಲಂಚದ ಬೇಡಿಕೆ ಇಡಲಾಗುತ್ತಿದೆ ಎಂಬುದನ್ನು ಬಹಿರಂಗಗೊಳಿಸಿದೆ.

ಲೋಕಾಯುಕ್ತ ಸಂಸ್ಥೆಯಲ್ಲೇ ಭ್ರಷ್ಟ ಅಧಿಕಾರಿಗಳು ಇದ್ದಾರೆಂಬ ಸಂಗತಿಯು ಸಾರ್ವಜನಿಕರಲ್ಲಿ ಗುಸುಗುಸು ಚರ್ಚೆಯಾಗುತ್ತಲೇ ಇತ್ತು. ಹಿಂದಿನ ಲೋಕಾಯುಕ್ತರಾಗಿದ್ದ ಸನ್ಮಾನ್ಯ ಶ್ರೀ. ಸಂತೋಷ್ ಎನ್.ಹೆಗ್ಡೆಯವರೂ ಸಹ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡಿ ತಾವು ಲೋಕಾಯುಕ್ತರಾಗಿದ್ದ ಸಮಯದಲ್ಲೂ ಲೋಕಾಯುಕ್ತ ಸಂಸ್ಥೆಯಲ್ಲಿ ಭ್ರಷ್ಟ ಅಧಿಕಾರಿಗಳು ಇದ್ದರೆಂದೂ , ತಾವು ಅದರನ್ನು ನಿಯಂತ್ರಿಸಲು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರೆಂದು ತಿಳಿಸಿರುತ್ತಾರೆ. ಆದರೆ ಲೋಕಾಯುಕ್ತ ಕೊಠಡಿಯ ಸನಿಹದಲ್ಲೇ ಇರುವ ಕೊಠಡಿಯಲ್ಲಿ ಲಂಚದ ಬೇಡಿಕೆ ಇಟ್ಟಿರುವುದು ಆಘಾತಕಾರಿಯಾಗಿದೆ. ಶ್ರೀಮತಿ ಸೋನಿಯಾ ನಾರಂಗ್ , ಐಪಿಎಸ್, ರವರು ಬರೆದ ಪತ್ರದಲ್ಲಿ ಉಲ್ಲೇಖಿಸಲಾಗಿರುವ ನಿರ್ದಿಷ್ಟ ವಿವರಗಳನ್ನು ಗಮನಿಸಿದರೆ , ಲೋಕಾಯುಕ್ತ ಸಂಸ್ಥೆಯಲ್ಲೇ ಸ್ವತಃ ಭ್ರಷ್ಟಾಚಾರ ನಿಗ್ರಹಿಸುವ ಕೊರತೆ (lack of vigilance) ಎದ್ದು ಕಾಣುತ್ತದೆ.

ಪ್ರಸ್ತುತ ಪ್ರಕರಣವು ಯಾವುದೇ ಹೊರವ್ಯಕ್ತಿಗಳಿಂದ ಅಲ್ಲದೆ, ಲೋಕಾಯುಕ್ತ ಸಂಸ್ಥೆಯಲ್ಲೇ ಕಾರ್ಯ ನಿರ್ವಹಿಸುತ್ತಿರುವ ಪೋಲೀಸ್ ಅಧಿಕಾರಿಯಿಂದ ಬಹಿರಂಗವಾಗಿರುವುದು ಅತ್ಯಂತ ಪ್ರಮುಖವಾದ ಅಂಶವಾಗಿರುತ್ತದೆ. ಶ್ರೀಮತಿ ಸೋನಿಯಾ ನಾರಂಗ್ , ಐಪಿಎಸ್ ರವರು ತಿಳಿಸಿರುವಂತೆ ಲೋಕಾಯುಕ್ತ ಸಂಸ್ಥೆಯು ನೇರವಾಗಿ ಭ್ರಷ್ಟಾಚಾರದ ವಿರುದ್ಧ ದೂರುಗಳನ್ನು ನೀಡಲು ಇರುವ ಏಕೈಕ ಸಂಸ್ಥೆಯಾಗಿದ್ದು ಅದರ ಮೇಲೆ ಜನರು ಅಪಾರವಾದ ನಂಬಿಕೆ ಇಟ್ಟಿದ್ದಾರೆ. ಎಲ್ಲಾ ಸರ್ಕಾರಿ ಕಚೇರಿಗಳ ಭ್ರಷ್ಟಾಚಾರ ನಿಗ್ರಹಿಸುವ ದೊಡ್ಡ ಜವಾಬ್ದಾರಿ ಹೊಂದಿರುವ ಲೋಕಾಯುಕ್ತ ಸಂಸ್ಥೆಯು ಸ್ವತಃ ಶುದ್ಧವಾಗಿರಬೇಕು ಎಂಬುದು ಜನರ ಕನಿಷ್ಠ ನಿರೀಕ್ಷೆಯಾಗಿದೆ.

ನಮ್ಮ ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯು ಭೂಗಳ್ಳರ ವಿರುದ್ಧ ಕ್ರಮಕ್ಕೆ ಆಗ್ರಹಿಸುತ್ತಲೇ, ಗೌರವಾನ್ವಿತ ಹೈಕೋರ್ಟ್ ನೀಡಿರುವ ನಿರ್ದಿಷ್ಟ ಸೂಚನೆಗಳನ್ನು ಪಾಲಿಸಲು ವಿಫಲವಾಗಿರುವ ಅಧಿಕಾರಿಗಳ ವಿರುದ್ಧವೂ ಕ್ರಮಕ್ಕೆ ಆಗ್ರಹಿಸುತ್ತಿದೆ. ದಿನಾಂಕ 2/5/2015 ರಂದು ವಿವಿಧ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ , ಬೃಹತ್ ಪ್ರತಿಭಟನಾ ಮೆರೆವಣಿಗೆ ನಡೆಸಿದ ಕಾರಣ ಸನ್ಮಾನ್ಯ ಲೋಕಾಯುಕ್ತರು ಪ್ರಭಾವಶಾಲಿಗಳು ಮಾಡಿದ ಗಂಭೀರವಾದ ಮೂರು ಭೂಕಬಳಿಕೆ ಪ್ರಕರಣಗಳ ಸ್ವಯಂಪ್ರೇರಿತ ತನಿಖೆ ನಡೆಸಲು ಒಪ್ಪಿರುತ್ತಾರೆ. ಆದರೆ, ಇದುವರೆವಿಗೂ ಅದರ ಬಗ್ಗೆ ಲೋಕಾಯುಕ್ತ ಕಛೇರಿಯಿಂದ ನಮಗೆ ಯಾವುದೇ ನಿರ್ಧಿಷ್ಟ ಮಾಹಿತಿ ಬಂದಿರುವುದಿಲ್ಲ.

ಪದೇ ಪದೇ ಸರ್ಕಾರದಲ್ಲಿರುವ ಭ್ರಷ್ಟರು ಮತ್ತು ಪ್ರಭಾವಶಾಲಿಗಳು ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸುವ ಯತ್ನ ನಡೆಸುವುದಲ್ಲದೆ ಲೋಕಾಯುಕ್ತ ಕಾಯ್ದೆಯನ್ನೇ ತಿದ್ದುಪಡಿಮಾಡಲು ಹೊರಟಿರುವುದು ದುರದೃಷ್ಟಕರ. ಶಾಸನಬದ್ಧ ನಿಯಮಗಳನ್ನು ಉಲ್ಲಂಘಿಸಿ ಲೋಕಾಯುಕ್ತರನ್ನೇ ನಿರ್ಲಕ್ಷಿಸುವ ಪ್ರಯತ್ನಗಳು ನಡೆದಾಗ , ಹಿಂದಿನ ಲೋಕಾಯುಕ್ತರು ವಿರೋಧಿಸಿದ ರೀತಿಯಲ್ಲೇ ಇಂದಿನ ಲೋಕಾಯುಕ್ತರೂ ಸಹ ವಿರೋಧ ವ್ಯಕ್ತಪಡಿಸಬೇಕೆಂದು ಜನರು ಬಯಸುತ್ತಾರೆ. ಪ್ರಸ್ತುತ ಸಂದರ್ಭದಲ್ಲೂ ಸಹ, ಲೋಕಾಯುಕ್ತ ಸಂಸ್ಥೆಯ ವಿಶ್ವಾಸಾರ್ಹತೆಯ ಪ್ರಶ್ನೆಯಾಗಿರುವುದರಿಂದ ಮಿಂಚಿನ ವೇಗದಲ್ಲಿ, ಪಾರದರ್ಶಕ ರೀತಿಯಲ್ಲಿ ತನಿಖೆ ನಡೆಸಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಸ್ವತಃ ಲೋಕಾಯುಕ್ತ ಸಂಸ್ಥೆಯಲ್ಲಿಯೇ ಕೆಲಸ ಮಾಡುತ್ತಿರುವ ಪೊಲೀಸ್ ಅಧಿಕಾರಿಯು ನೀಡಿದ ದೂರಿಗೂ ಲೋಕಾಯುಕ್ತರು ದೀರ್ಘ ಮೌನ ತಳೆದಿರುವುದು ಗಂಬೀರವಾದ ವಿಷಯವಾಗಿದ್ದು ಗಾರವಾನ್ವಿತ ರಾಜ್ಯಪಾಲರು ಮಧ್ಯ ಪ್ರವೇಶಿಸಬೇಕಾದ ಅನಿವಾರ್ಯತೆ ಎದುರಾಗಿದೆ. ರಾಜ್ಯದಲ್ಲಿ ಸಾಂವಿಧಾನಿಕ ಮುಖ್ಯಸ್ಥರಾಗಿರುವ ಗಾರವಾನ್ವಿತರಾದ ತಾವು ಲೋಕಾಯುಕ್ತ ಸಂಸ್ಥೆಯ ಘನತೆ ಹಾಗೂ ಶಿಸ್ತು ಎತ್ತಿಹಿಡಿಯಲು ಇದು ಸೂಕ್ತ ಸಮಯವಾಗಿದೆ. ಲೋಕಾಯುಕ್ತ ಸಂಸ್ಥೆಯು ಭ್ರಷ್ಟಾಚಾರವನ್ನು ನಿಗ್ರಹಿಸುವ ದೊಡ್ಡ ಜವಾಬ್ದಾರಿ ಹೊತ್ತಿರುವುದರಿಂದ ಎಳ್ಳಷ್ಟೂ ಸಂಶಯಕ್ಕೆ ಎಡೆ ಮಾಡಿಕೊಡದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂಬುದು ಜನರ ಭಾವನೆಯಾಗಿದೆ.

ಈ ಹಿನ್ನೆಲೆಯಲ್ಲಿ ಗೌರವಾನ್ವಿತರಾದ ತಾವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ವಿನಂತಿಸುತ್ತೇವೆ:

1. ಶ್ರೀಮತಿ ಸೋನಿಯಾ ನಾರಂಗ್ , ಐಪಿಎಸ್ ರವರು ಬಹಿರಂಗಪಡಿಸಿರುವ ನಿರ್ದಿಷ್ಟ ಪ್ರಕರಣದ ತನಿಖೆಯನ್ನು ಕಳಂಕರಹಿತ ಸದಸ್ಯರನ್ನೊಳಗೊಂಡ ಒಂದು ಸ್ವತಂತ್ರ್ಯ ವಿಶೇಷ ತನಿಖಾ ತಂಡಕ್ಕೆ **(SIT)** ವಹಿಸಬೇಕು. ವಿಚಾರಣೆಯು ಅತ್ಯಂತ ಪಾರದರ್ಶಕವಾಗಿದ್ದು ಸಾರ್ವಜನಿಕವಾಗಿ ನಡೆಯಬೇಕು.
2. 2013 ರಿಂದ ಮುಕ್ತಾಯಗೊಳಿಸಿರುವ ಹಿರಿಯ ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ನೀಡಿದ ದೂರಿಗೆ ಸಂಬಂಧಿಸಿದ ಎಲ್ಲ ಕಡತಗಳನ್ನು ರಕ್ಷಿಸುವುದು ಮತ್ತು ಬಹಿರಂಗಪಡಿಸಬೇಕು .
3. ಲೋಕಾಯುಕ್ತರ ಪೂರ್ವಾನುಮತಿಯಿಲ್ಲದೆ ಲೋಕಾಯುಕ್ತ ಸಂಸ್ಥೆಗೆ ನಿಯೋಜಿಸಿದ ಅಧಿಕಾರಿಗಳು ನಿರ್ವಹಿಸಿದ ಪ್ರಕರಣಗಳನ್ನು ಸಂಪೂರ್ಣ ಪರಿಶೀಲನೆಗೆ ಒಳಪಡಿಸಬೇಕು..

ಗೌರವಾನ್ವಿತರಾದ ತಾವು ಲೋಕಾಯುಕ್ತ ಸಂಸ್ಥೆಯ ಘನತೆ ಮತ್ತು ಪಾವಿತ್ರ್ಯತೆ ಎತ್ತಿಹಿಡಿಯಲು ಮತ್ತು ನಾಗರಿಕರ ನಂಬಿಕೆಯನ್ನು ಉಳಿಸಲು ಮೇಲಿನ ಕ್ರಮಗಳನ್ನು ಅತೀ ಶೀಘ್ರದಲ್ಲಿ ತೆಗೆದುಕೊಳ್ಳುತ್ತೀರೆಂದು ನಾವು ನಂಬಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಏ.ಟಿ.ರಾಮಸ್ವಾಮಿ)

ಸಂಚಾಲಕರು, ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

ಗೆ,

ಗೌರವಾನ್ವಿತ ಶ್ರೀ ವಾಜುಬಾಯಿ ರೂಡಾಬಾಯಿ ವಾಲ,

ಕರ್ನಾಟಕ ರಾಜ್ಯಪಾಲರು,

ರಾಜಭವನ, ಬೆಂಗಳೂರು**.**

ಪ್ರತಿಯನ್ನು:

1. ಸನ್ಮಾ್ನ್ಯ ಮುಖ್ಯ ನ್ಯಾಯಾಧೀಶರು, ರಾಜ್ಯ ಉಚ್ಛ ನ್ಯಾಯಾಲಯ - ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಪರಿಹಣಿಸಬೇಕೆಂದು ಕೋರಿ.
2. ಸನ್ಮಾ್ನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, - ಇಂತಹ ಸಂದರ್ಭಗಳಲ್ಲಿ ಯಾವುದು ಅತ್ಯಂತ ಸೂಕ್ತವೋ ಅಂತಹ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಕೋರಿ
3. ಸನ್ಮಾ್ನ್ಯ ಮುಖ್ಯಮಂತ್ರಿಗಳು,ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು - ಈ ವಿಷಯವನ್ನು ಅತ್ಯಂತ ಗಂಭೀರವಾದುದೆಂದು ಪರಿಗಣಿಸಿ, ಲೋಕಾಯುಕ್ತರ ಪೂರ್ವಾನುಮತಿ ಇಲ್ಲದೆ ಸರ್ಕಾರ ಲೋಕಾಯುಕ್ತ ಸಂಸ್ಥೆಗೆ ನಿಯೋಜಿಸಿರುವ ಎಲ್ಲಾ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಲು ಕೋರಿ**.**